5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ಆರೋಪಿಯನ್ನು ವಿ.ಸಿ. ಮುಖಾಂತರ ಹಾಜರು ಪಡಿಸಲಾಯಿತು.
ದಿನಾಂಕ ಃ 17.10.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 13 ಪಿ. ಡಬ್ಲ್ಯೂ:12

| | |
|---|---|
| ಸಾಕ್ಷಿದಾರರ ಹೆಸರು | ಜಗದೀಶ |
| ತಂದೆಯ ಹೆಸರು | ಮಹದೇವು |
| ವಯಸ್ಸು | 40 ವರ್ಷ |
| ಉದ್ಯೋಗ | ಚಾಲಕ ವೃತ್ತಿ |
| ವಾಸ | ನೆಟ್ಟಕಲ್ಲು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ವಿ.ಸಿ. ಮುಖಾಂತರ ಹಾಜರು ಪಡಿಸಿದ ಆರೋಪಿ ಸಿದ್ದೇಗೌಡ ಗೊತ್ತು. ಅವರು ನಮ್ಮ ಊರಿನವರಾಗಿರುತ್ತಾರೆ. ಅವರು ಮನೆಯು ನಮ್ಮ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿದೆ. ಅವರು ವ್ಯವಸಾಯ ಮತ್ತು ಆಡುಗಳನ್ನು ಮೇಯಿಸುವ ಕೆಲಸ ಮಾಡುತ್ತಿದ್ದರು. ಅವರ ಮನೆಯಲ್ಲಿ, ಸಿದ್ದೇಗೌಡರವರು ಮತ್ತು ಅವರ ಹೆಂಡತಿ ಇದ್ದರು. ಅವರ ಮಕ್ಕಳು ಮೈಸೂರಿನಲ್ಲಿ ಇದ್ದರು.
2. ಸುಮಾರು 5 ವರುಷಗಳ ಹಿಂದೆ, ಸದರಿ ಸಿದ್ದೇಗೌಡರವರ ಹೆಂಡತಿ ತೀರಿಕೊಂಡಿರುತ್ತಾರೆ. ಸೀಮೆಎಣ್ಣೆ ಹಾಕಿಕೊಂಡು ಸದರಿ ಸಿದ್ದೇಗೌಡರವರ ಹೆಂಡತಿ ತೀರಿಕೊಂಡಿರುತ್ತಾರೆ. ಸಿದ್ದೇಗೌಡರವರ ಹೆಂಡತಿಯ ಶವವನ್ನು ಮಳವಳ್ಳಿಗೆ ತೆಗೆದುಕೊಂಡುಹೋಗಬೇಕೆಂದು ಸಿದ್ದೇಗೌಡರವರ ಮಗ ನನ್ನನ್ನು ಕರೆದಿದ್ದರು. ನನ್ನ ಟಾಟಾ ಏಸ್ ವಾಹನದಲ್ಲಿ ಸಿದ್ದೇಗೌಡರವರ ಹೆಂಡತಿಯ ಶವವನ್ನು ಮಳವಳ್ಳಿಗೆ ತೆಗೆದುಕೊಂಡು ಹೋಗಿರುತ್ತೇನೆ. ಸದರಿ ಸಿದ್ದೇಗೌಡರವರ ಹೆಂಡತಿಗೆ ಸುಟ್ಟ ಗಾಯಗಳು ಆ ಸಮಯಕ್ಕೆ ಎಷ್ಟು ದಿನಗಳ ಹಿಂದಕ್ಕೆ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

3. ಸದರಿ ಸಿದ್ದೇಗೌಡರವರ ಹೆಂಡತಿಯ ಮೇಲಿನ ಬೆಂಕಿಯನ್ನು ಕೆಡಿಸಲು ಹೋದಾಗ, ಅವರ ಮಗನಿಗೆ ಸುಟ್ಟ ಗಾಯಗಳಾಗಿತ್ತು. ಸದರಿ ಘಟನೆಗಿಂತ 3 ತಿಂಗಳ ಹಿಂದೆ ಅವರ ಮನೆಯನ್ನು ಕಟ್ಟಲಾಗಿತ್ತು. ಸದರಿ ಸಿದ್ದೇಗೌಡರವರ ಹೆಂಡತಿಗೆ ಯಾವ ರೀತಿ ಸುಟ್ಟು ಗಾಯವಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ನಾನು ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ದಿಃ 30.08.2022 ರಂದು ಸಿದ್ದೇಗೌಡರವರ ಹೆಂಡತಿ ಮೃತರಾಗಿದ್ದರು ಎಂದರೆ ನಾನು ಸದರಿ ವಿಚಾರವನ್ನು ಮರೆತು ಹೋಗಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಿಃ 03.08.2022 ರಂದು ಆರೋಪಿಯು, ತನಗೆ ಹಾಗೂ ತನ್ನ ತಾಯಿಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದರೆಂದು ಪ್ರಾಸಾ.1 ಸಿದ್ದರಾಜು ರವರ ಮುಖೇನ ಗೊತ್ತಾಯಿತು ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ ಮುಖ್ಯ defence counsel ರವರಿಂದ ಃ**

5. ಸಿದ್ದರಾಜು ಮುಖೇನ ಅವರಿಗೆ ಮತ್ತು ಅವರ ತಾಯಿಗೆ ಆರೋಪಿ ಸೀಮೆಎಣ್ಣೆ ಹಾಕಿ ಬೆಂಕಿ ಹಚ್ಚಿದ್ದರೆಂದು ಹೇಳಿದ್ದರೆಂದು ಪೊಲೀಸರಿಗೆ ನಾನು ಹೇಳಿರುತ್ತೇನೆ. ಆ ರೀತಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆಯ ವಿಚಾರ ನನಗೆ ತಿಳಿದಿಲ್ಲ ಎಂದರೆ, ನಾನು ಊರಿನವರಾಗಿದ್ದರಿಂದ ಸ್ವಲ್ಪ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಖುದ್ದಾಗಿ ನನಗೆ ಸದರಿ ಘಟನೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.